ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 17th October 1970.

The House met in the Assembly Chamber, Vidhana Soudha, Bangalore at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

MR. DEPUTY SPEAKER.—I understand the Hon. Minister is held up in the Council and he is not able to answer question No. 92 here. So, we shall take it up later on.

Audit Reports of Magadi Taluk Development Board and N.E.S Department

193. SRI C. R. RANGE GOWDA (Magadi).—

Will the Minister for Development be pleased to state :—

(*a*) whether it is a fact that the State Accounts Department has audited the accounts of the Magadi Taluk Development Board and N. E. S. Department ;

(*b*) whether it is a fact that the State Accounts Department have remarked during their audit that these accounts should be audited by the technical audit cell ;

(*c*) if so, whether the audit reports relating to the years 1967-68, 1968-69 and 1969-70 and the latest audit report will be placed on the Table of the House ?

SRI B. L. GOWDA (Deputy Minister for Co-operation).—

(*a*) Accounts up to 1968-69 have been audited. The accounts of 1969-70 are being audited.

(*b*) No.

(*c*) However a list of irregularities and misappropriation case mentioned in the Audit Reports will be placed on the Table of the House.

Sri C. R. RANGE GOWDA.—Sir, may I know whether these reports of the Audit are considered by the Government and whether there are any cases of irregularities or misappropriation found in these reports ?

†Sri B. L. GOWDA.—It has been mentioned that the Taluk Board has taken up a bore well without taking technical opinion. We have sent it for technical opinion and that opinion has not yet been received.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ.—ಈ ಅಗ್ರಿಕಲ್‌ಚರಲ್ ಟ್ರೇನಿಂಗ್ ಪ್ರೋಗ್ರಾಂ ಇಂಪ್ಲಿಮೆಂಟ್ ಮಾಡುವಾಗ ಮಾಗಡಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯರುಗಳು ಅಟೆಂಡೆನ್ಸ್ ಇಲ್ಲದೆ ಸುಮ್ಮನೆ ವ್ಯಕ್ತಿಗಳನ್ನು ಟ್ರೇನಿಂಗ್‌ಗೆ ಕಳುಹಿಸತಕ್ಕಂಥದ್ದು ಸರಕಾರದ ಗಮನಕ್ಕೆ ಬಂದಿದೆಯೇ ? ಈ ರೀತಿ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಟ್ರೇನಿಂಗ್‌ಗೆ ಬಂದ ವ್ಯಕ್ತಿಗಳ ಹೆಸರುಗಳು ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಶಿಕ್ಷೆ ಮಾಡುತ್ತೀರಾ ? ಮತ್ತು 10 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಕಾಮಗಾರಿಗಳನ್ನು ಮಾಡಬೇಕಾದರೆ ಟೆಂಡರುಗಳನ್ನು ಕರೆದು ಮಾಡಬೇಕು ಎನ್ನತಕ್ಕ ನೀತಿ ನಿಯಮಗಳು ಇದ್ದರೂ ಸಹ ಈ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಟೆಂಡರ್ ಕರೆಯದೆ ಸ್ವೇಚ್ಛಾ ರೀತಿಯಲ್ಲಿ ತಮಗೆ ಬೇಕಾದವರಿಗೆ ಕೆಲಸ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಈ ಎರಡೂ ಲೋಪಗಳು ಇರುವುದು ನಿಜವಾದಲ್ಲಿ ಆದರೆ ಸರಕಾರ ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಹೇಳಿದ್ದು. ಇದು ನನ್ನ ಗಮನಕ್ಕೆ ಬಂದಿಲ್ಲ.

Sri C. R. RANGE GOWDA.—Sir, in the audit report furnished for 1967-68 1968-69, only important irregularities are given. What about other irregularities.

Sri B. L. GOWDA.—The audit report is a very big one, consisting of 50 to 100 pages. I am prepared to place it on the Table of the House. One thing that is pointed out by the auditor is purchase of bore-well equipment and they have said that technical officer's certificate is not found and it has not been obtained from any competent authority. That is why the Assistant Commissioner has sent the papers for technical opinion.

ಶ್ರೀ ಚಿಕ್ಕೇಗೌಡ.—1967-68, 1968-69, 1969-70ರ ಆಡಿಟ್ ಆಗುವವರೆಗೂ ಅಲ್ಲಿ ಇರೆಗ್ಯುಲರಿಟೀಸ್ ಆಗದಂತೆ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನರ್ ಕಮಿಷನರ್‌ಗಳು ಆಯಾ ತಾಲ್ಲೂಕು ಮಂಡಲಿಗಳಿಗೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನಾ ಆಫೀಸುಗಳಿಗೆ ಹೋಗಿ ಚೆಕ್ ಮಾಡಬೇಕು. ಹಾಗೇನಾದರೂ ಇರೆಗ್ಯುಲ್ಯಾರಿಟೀಸ್ ಕಂಡುಬಂದರೆ ಅವರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಈಗ ವರ್ಷಕ್ಕೆ ಒಂದು ಸಾರಿ ಅಥವಾ ಎರಡು ವರ್ಷಕ್ಕೆ ಒಂದು ಸಾರಿ ಆಡಿಟ್ ಆಗುವುದರಿಂದ ಸರಕಾರದ ಹಣ ದುರ್ವ್ಯಯವಾಗುವುದಕ್ಕೆ ಅವಕಾಶವಾಗುವುದಿಲ್ಲವೇ ?

Sri B. L. GOWDA.—I have before me the report of the Chief Controller of Audit. The official investigation report is not before me, Sir.

ಶ್ರೀ ಎನ್. ಜಿ. ಹಾಲಪ್ಪ.—ಮಿಸ್‌ಅಪ್ರೋಪ್ರಿಯೇಷನ್ ಕೇಸ್‌ನ ಎಷ್ಟು ಇದೆ ? ಅದರ ಅಮೌಂಟ್ ಎಷ್ಟು ?

Sri B. L. GOWDA.—I have not said there is any misappropriation. According to this Report, there is no misappropriation.

Sri N. G. HALAPPA.—It is clear from the answer which says :

> "(c) however, a list of irregularities and misappropriation cases mentioned in the Audit Reports will be placed on the Table of the House".

---

†Indicates that the remarks or speeches have not been revised by the member concerned.

It is therefore presumed that there are cases of misappropriation. If so, what is the amount that has been misappropriated and whether any action has been taken against officers who are expected to inspect these offices for not pointing out these defects or whether the persons who committed misappropriation have been proceeded against ?

SRI B. L. GOWDA.—Sir, I have gone through the Audit report. There are no cases of misappropriation. There are irregularities. I have already said that I am going to place the Audit report on the Table of the House.

ಶ್ರೀ ಬಾಪೂಗೌಡ.—ಈ ರೀತಿಯಾಗಿ ಬೋರಿಂಗ್ ವೆರ್ ಮಿಷನ್ನನ್ನು ಖರೀದಿ ಮಾಡಿದ್ದಾರೆ. ಅದರ ಬಗ್ಗೆ ಆಡಿಟ್ ರಿಪೋರ್ಟ್‌ವರದಿಯಲ್ಲಿ ಏನು ಹೇಳುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಬೋರಿಂಗ್ ವೆರ್ ಮೆಷೀನನ್ನು ಈ ರೀತಿ ತೆಗೆದುಕೊಳ್ಳುವುದಕ್ಕೆ ಮುಂಚೆ ಟೆಕ್ನಿಕಲ್ ಆಫೀಸರ್ಸ್ ಸಲಹೆ ಪಡೆಯಬೇಕಾಗಿತ್ತು ಮತ್ತು ಅದರ ಬೆಲೆಯನ್ನು ತಿಳಿದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದೆ.

ಶ್ರೀ ಸಿ. ಎಂ ಎಸ್. ಶಾಸ್ತ್ರಿ :—ಉತ್ತರದಲ್ಲಿ ಹಣ ದುರುಪಯೋಗವಾಗಿದೆ ಎಂದು ಕಂಡು ಬಂದಿದೆ. ಆದ್ದರಿಂದ ಹಣ ದುರುಪಯೋಗವಾಗಿದೆಯೇ ಇಲ್ಲವೇ ಎಂಬುದನ್ನು ತಾವು ಡೆಫನೆಟ್ ಆಗಿ ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಹಣ ದುರುಪಯೋಗವಾಗಿರುವುದು ಯಾವುದೂ ಇಲ್ಲ. ಇರ್ರಗ್ಯುಲ್ಯಾರಿಟೀಸ್ ಆಗಿವೆ. ಹಣ ದುರುಪಯೋಗವಾಗಿಲ್ಲವೆಂದು ಹೇಳಿದ್ದಾರೆ.

ಶ್ರೀ ಹಂಡಿ ಶಿವಣ್ಣ—ತಾಲ್ಲೂಕು ಅಧ್ಯಕ್ಷರುಗಳು ಹಣ ದುರುಪಯೋಗವಾಗಿರುವ ಕೇಸುಗಳ ಬಗ್ಗೆ ದೂರು ಕೊಟ್ಟಾಗ್ಗೆ ಅದನ್ನು ಎಷ್ಟು ದಿವಸಗಳಲ್ಲಿ ತನಿಖೆಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಏನಾದರೂ ಕಾಲ ಮಿತಿ ಇಡಕ್ಕೆ ಇದೆಯೇ ?

ಶ್ರೀ ಬಿ. ಎಲ್. ಗೌಡ:—ಅದನ್ನು ಜಾಗ್ರತೆಯಾಗಿ ಮಾಡಬೇಕೆಂದು ನಿಯಮ ಇದೆ. ಪ್ರತಿಯೊಂದು ಕೇಸನ್ನೂ ಎಷ್ಟೆಷ್ಟು ಅವಧಿಯಲ್ಲಿ ಎನ್‌ಕ್ವೈರಿ ಪೂರ್ತಿಮಾಡಬಹುದೆಂದು ಆದೇಶವನ್ನು ಕೊಡುವುದಕ್ಕಾಗುವುದಿಲ್ಲ. ಪ್ರತಿಯೊಂದೂ ಆಯಾ ಸಂದರ್ಭದ ಮೇರೆ ಅವಲಂಬನೆಯಾಗುತ್ತದೆ. ಸರ್ವೆಸಾಮಾನ್ಯವಾಗಿ ಪ್ರತಿಯೊಂದು ಕೇಸಿನಲ್ಲಿಯೂ 6 ತಿಂಗಳೊಳಗೆ ಎನ್‌ಕ್ವೈರಿ ಪೂರ್ತಿಮಾಡಬೇಕೆಂದು ಹೇಳಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಹಣ ದುರುಪಯೋಗವಾಗಿರುವ ಅನೇಕ ಸಂದರ್ಭಗಳು ತಾಲ್ಲೂಕುಬೋರ್ಡು ಆಡಳಿತದಲ್ಲಿ ಕಂಡುಬಂದಿರುವ ಆಡಿಟ್ ವರದಿಗಳಿಂದ ಗೊತ್ತಾಗಿವೆ. ಆಯಾ ಆಫೀಸಿನಲ್ಲಿ ಆದಷ್ಟು ಜಾಗ್ರತೆಯಾಗಿ ಆಡಿಟ್ ಮಾಡಿಸಿ ಈ ನಭೆಗೆ ಒಂದು ವರದಿಯನ್ನು ಕೊಡಬೇಕು. ಈಗ ಯಾವ್ಯಾವ ತಾಲ್ಲೂಕು ಬೋರ್ಡ್‌ಗಳಲ್ಲಿ ಅಕ್ರಮ, ಹಣ ದುರುಪಯೋಗವಾಗಿದೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಸರ್ವೇಸಾಮಾನ್ಯವಾಗಿ ಎಲ್ಲಾ ತಾಲ್ಲೂಕುಬೋರ್ಡುಗಳಲ್ಲಿ ಹಣ ದುರುಪಯೋಗವಾಗಿದೆಯೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಆದರೆ ಆಡಿಟ್ ಚೆನ್ನಾಗಿ ನಡೆಯುತ್ತಾ ಇಲ್ಲ. ಆಡಿಟ್ ಮಾಡುವ ಸಿಬ್ಬಂದಿ ಜಾಸ್ತಿಮಾಡಿ ಲೋಪದೋಷಗಳು ಏನು ಇದೆ ಅದನ್ನು ತಾಲ್ಲೂಕು ಬೋರ್ಡು ಸದಸ್ಯರಿಗೆ ತಿಳಿಸುವುದಕ್ಕೆ ಪ್ರಯತ್ನವಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಆಡಿಟ್ ರಿಪೋರ್ಟ್‌ನಲ್ಲಿ ನೂರಾರು ಆಬ್‌ಜಕ್ಷನ್ಸ್ ಇವೆ. ಒಂದೊಂದು ಪುಟದಲ್ಲಿಯೂ ಮಿಸ್‌ಅಪ್ರೊಪ್ರಿಯೇಷನ್, ಮಿಸ್‌ಯೂಸ್ ಇರತಕ್ಕಂಥಾದ್ದು ಇವೆ. ಇಲ್ಲ ಏನೂ ಮಿಸ್‌ಅಪ್ರೊಪ್ರಿಯೇಷನ್ ಆಗಿಲ್ಲವೆಂದು ಹೇಳಿದೆ. ತಾವು ಆ ಆಡಿಟ್ ರಿಪೋರ್ಟ್‌ಗಳನ್ನು ಕೂಲಂಕಷವಾಗಿ ನೋಡಿ ಅದರ ಬಗ್ಗೆ ಸಮಗ್ರ ತನಿಖೆ ನಡೆಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅಸಿಸ್ಟೆಂಟ್ ಕಮಿಷನರ್ ಅವರಿಗೆ ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಬೇಕೆಂದು ಹೇಳಿದೆ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇರ್ರೆಗ್ಯುಲ್ಯಾರ್‌ಟೀಸ್ ಇದ್ದರೆ ಮಾತ್ರ ಆಡಿಟ್ ರಿಪೋರ್ಟನ್ನು ಈ ಸಭೆಯ ಟೇಬಲ್ ಮೇಲೆ ಇಡುತ್ತೇನೆಂದು ಹೇಳಿದ್ದಾರೆ. ಈಗ ಉಪ ಪ್ರಶ್ನೆಯಲ್ಲಿ ಯಾವುದೂ ಅಂತಹ ಪ್ರಶ್ನೆ ಇಲ್ಲವೆಂದು ಹೇಳುತ್ತೀರಿ. ಆದ್ದರಿಂದ ತಾವು ಕೊಟ್ಟಿರುವ ಉತ್ತರವನ್ನು ಸತ್ಯಕ್ಕೆ ದೂರವಾದಂಥಾದ್ದು ಎಂಬುದಾಗಿ ಭಾವಿಸಬೇಕೋ ಅಥವಾ ತಾವು ಈ ಸಭೆಯಲ್ಲಿ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡುತ್ತಾ ಇಲ್ಲವೆಂದು ಭಾವಿಸಬೇಕೋ ?

ಶ್ರೀ ಬಿ. ಎಲ್. ಗೌಡ.—1967-68, 1968-69, 1969-70ನೇ ಸಾಲುಗಳ ಆಡಿಟ್ ವರದಿಗಳನ್ನು ಈ ಸಭೆಯ ಮುಂದೆ ಮಂಡಿಸುತ್ತೀರಾ ಎಂದು ಕೇಳಿದ್ದಾರೆ. Regarding Irregularities and misappropriation, I have already stated that I am going to place a copy of the Audit report on the Table of the House.

ಶ್ರೀ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ಸೊಸೈಟಿಯು ಲೆಕ್ಕಗಳನ್ನು ಆಡಿಟ್ ಮಾಡಿದಾಗ ಒಂದು ಸಾರಿ 2½ ಲಕ್ಷ ಕಡಿಮೆಯಾಗಿದೆ, ಇನ್ನೊಂದುಸಾರಿ ಆಡಿಟ್ ಮಾಡಿದಾಗ 1½ ಲಕ್ಷ ಕಡಿಮೆಯಾಗಿದೆ. ಮತ್ತೊಂದು ಸಾರಿ ಆಡಿಟ್ ಮಾಡಿಸಿದಾಗ ಒಂದು ಲಕ್ಷ ಕಡಿಮೆಯಾಗಿದೆ. ಆದ್ದರಿಂದ ಆಡಿಟ್ ರಿಪೋರ್ಟ್‌ನ್ನು ಬಹಿರಂಗಪಡಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದು ತಾಲ್ಲೂಕು ಅಭಿವೃದ್ಧಿಮಂಡಲಿಗೆ ಸಂಬಂಧಪಟ್ಟ ಪ್ರಶ್ನೆ. ಮಾನ್ಯ ಸದಸ್ಯರು ಗುಂಡ್ಲುಪೇಟೆ ಮಾರ್ಕೆಟಿಂಗ್ ಸೊಸೈಟಿಯ ವಿಷಯವಾಗಿ ಹೇಳುತ್ತಿದ್ದಾರೆ.

Effecting repairs to Talikote-Veerapur Road

235. **Sri S. M. GUREDDY** (Muddebihal).—

Will the Minister for Public Works be pleased to state :—

(*a*) whether it has come to their notice that due to not effecting repairs to Talikote-Veerapura road the buses have stopped plying ;

(*b*) if so the steps taken by them to effect repairs to the road ?

Sri BASAVARAJ MAGAVI (Deputy Minister for Public Works).—

(*a*) The Government have noticed that the buses do not ply only during the rainy season.

(*b*) Will be considered.

ಶ್ರೀ ಎಸ್. ಎಂ. ಗುರೆಡ್ಡಿ.—ಫೆಬ್ರವರಿ, ಮಾರ್ಚ್, ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಈ ರಸ್ತೆಯನ್ನು ರಿಪೇರಿ ಮಾಡುವ ಕ್ರಮವನ್ನು ಯಾವರೀತಿಯಾಗಿ ಹಾಕಿಕೊಂಡಿದ್ದೀರಿ ?

ಶ್ರೀ ಬಿ. ವಿ. ಮಾಗಾವಿ.—ಈ ರಸ್ತೆಯನ್ನು ಪಿ. ಡಬ್ಲ್ಯೂ. ಡಿ. ಯವರು ಅವರ ವಶಕ್ಕೆ ತೆಗೆದುಕೊಂಡಿದ್ದು ನಿಜ. ಈ ರಸ್ತೆಯನ್ನು ಈಗಾಗಲೇ ಸಾಕಷ್ಟು ರಿಪೇರಿ ಮಾಡಿದ್ದೇವೆ. 1970-71ನೇ ಬಡ್ಜೆಟ್ಟಿನಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಈ ರಸ್ತೆಯ ರಿಪೇರಿ ಮಾಡುವುದಕ್ಕೆ ಮಂಜೂರು ಕೊಟ್ಟಿದ್ದೇವೆ. ಇಷ್ಟಲ್ಲದೆ ಫ್ಯಾಮಿನ್ ರಿಲೀಫ್‌ನಲ್ಲಿಯೂ ಕೂಡ 1967-68 ಮತ್ತು 1968-69ನೇ ಸಾಲುಗಳಲ್ಲಿ 2 ಕೋಟಿ 37 ಲಕ್ಷ 667 ಸಾವಿರ ರೂಪಾಯಿಗಳನ್ನೂ 1969-70ನೇ ಸಾಲಿನಲ್ಲಿ 23,675 ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೇವೆ. ಈ ವರ್ಷದ ಬಡ್ಜೆಟ್ಟಿನಲ್ಲಿ 18 ಸಾವಿರ ರೂಪಾಯಿಗಳನ್ನು ಈ ರಸ್ತೆಗಾಗಿ ವ್ಯಯ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಬಾಪೂ ಗೌಡ.—ಈ ರಸ್ತೆ ಇಂಟರ್‌ಸ್ಟೇಟ್ ರಸ್ತೆಯಲ್ಲದೆ ವಿಜಾಪುರ ಮತ್ತು ಗುಲ್ಬರ್ಗಾ ಹಾಗೂ ಸೋಲಾಪುರಕ್ಕೆ ಲಿಂಕ್ ಆಗುತ್ತದೆ. ಇದರ ಮೇಲೆ ಹೆಚ್ಚಿಗೆ ಬಸ್ಸುಗಳು ಓಡಾಡುವುದರಿಂದ, ಈ ರಸ್ತೆಗೆ ಹೆಚ್ಚು ಖರ್ಚುಮಾಡಿ ಅದನ್ನು ಜಾಗ್ರತೆಯಾಗಿ ಸರಿಪಡಿಸುತ್ತೀರಾ ?